SATYAVADI Oldest Newspaper of Mysore ವಾರದ ಸಂಚಿಕೆ
Daily & Weekly Reg No. M 1299

ಸತ್ಯವಾದಿ

ಸಂಪುಟ 26 ಸಂಚಿಕೆ 298] ಶನಿವಾರ 8—5—1943 [6 ಪೈ

ವರ್ತಮಾನ ಸಂಗ್ರಹ

ಕರಾಚಿಯಲ್ಲಿ ಒಬ್ಬ ಮುಸಲ್ಮಾನನು ಒಂದು ಹುಡುಗಿಯನ್ನೂ ಅವಳ ತಾಯಿಯನ್ನೂ ಚೂರಿಯಿಂದ ಚುಚ್ಚಿ ಕೊಂದಿದ್ದಲ್ಲದೆ; ಆಹುಡುಗಿಯ ಸಣ್ಣತಮ್ಮನಿಗೆ ಚಿಂತಾಜನಕಗಾಯಗಳಾಗಿವೆ. ಇದಕ್ಕೆ ಕಾರಣವೇನೆಂದರೆ ಅಮುಸುಲ್ಮಾನನು ಆ ಹುಡುಗಿಯನ್ನು ಪ್ರೀತಿಸುತ್ತಿದ್ದನೆಂದೂ ಹುಡುಗಿಯ ತಾಯಿಯು ಅವನಿಗೆ ಮಗಳನ್ನು ಮದುವೆಮಾಡಿಕೊಡಲಿಕ್ಕೆ ನಿರಾಕಾರಿಸಿದಳೆಂದು ತಿಳಿಯುತ್ತೆ. ಆಮುಸಲ್ಮಾನನನ್ನು ಬಂಧಿಸಿದ್ದಾರೆ

ಂ ಂ

ಆಕ್ಕಶಂಗೆರಹಾಳದಲ್ಲಿ ಪೋಲೀಸರಿಗೆ ಬೇಕಾದ ಬಸಪ್ಪ ಮಠಪತಿ, ನಿಂಗಪ್ಪ ಕಲಿಂಗಣ್ಣವರ ಇವರ ಮನೆಗಳಲ್ಲಿ ಅನುಕ್ರಮವಾಗಿ ತಾಯಿ, ಹೆಂಡತಿ ಮಕ್ಕಳನ್ನು ಹಿಡಿದು ಲಾಕಪ್ಪಿನಲ್ಲಿಟ್ಟು ಈಗ ಬಿಡುಗಡೆಮಾಡಿ ಅವರ ಮನೆಗಳಿಗೆ ಕೇಲಿಹಾಕಿ ಕೀಲುಮಾಡಿಯುವರು

ಂ ಂ

ಬಾಂಬಯಿ— ಸೋನೂಬಾಯಿ ಎಂಬ 16 ವರುಷದ ಹುಡುಗಿಯು ತಲೆದಿಂಬಿನಹತ್ತಿರ ದೀಪ ಇಟ್ಟು ಮಲಗಿರುವಾಗ ರಾತ್ರಿ ದೀಪಕ್ಕೆ ಧಕ್ಕೆಪತ್ತಿ ಬಿದ್ದುದರಿಂದ ಹುಡುಗಿಯು ಅರಿವಿಗೆ ಬಿಂಕಿಹತ್ತಿ ಮರಣ ಹೊಂದಿದಳು.

ಂ ಂ

ಪ್ರತಿಜ್ಞೆ ತೆಗೆದುಕೊಳ್ಳುವದು

ಈಚೆಗೆ ಒಂದು ಬ್ರಿಟಿಷ್ ಕೋರ್ಟಿನಲ್ಲಿ 34 ಜೈನಿಗಳು ವಾಗ್ದಾನ ತೆಗೆದುಕೊಳ್ಳಬೇಕಾಯಿತು. ನಮ್ಮ ಪದ್ಧತಿ ತಪ್ಪಿಯೊಡೆಯುವದು, ಆದ್ದರಿಂದ 34 ತಪ್ಪಿಗಳು ತರಿಸಿರೆಂದರು. ಮ್ಯಾಜಿಸ್ಟ್ರೇಟರು ವೃಥಾನಷ್ಟವಿದು ಈಗಿನ ಯುದ್ಧದ ಕಾಲದಲ್ಲಿ ಎಂದರು. ಜೈನಿಗಳು ಒಪ್ಪಲಿಲ್ಲ. ಮ್ಯಾಜಿಸ್ಟ್ರೇಟರು ಎರಡು ನೆಟ್ಟಿಯನ್ನು ಕೊಡಲಾಗುವುದು ಅದನ್ನೆ 34 ಮುಂದಿಯೂ ಉಪಯೋಗಿಸಿರೆಂದರು. ಇದೂ ಆಗಲಾರದೆಂದು ಹೇಳಿದರು. ಈಗ ತಪ್ಪಿಗಳ ಅಭಾವವಾಗಿರುವ ಕಾರಣ ಪ್ರತಿಯೊಬ್ಬರು ಒಂದು ಬದುಕಿರುವ ಕೋಳಿಯ ಕತ್ತನ್ನು ಕಿವಿಚಬಹುದೆಂದು ದ್ವಿಭಾಷಿಯು ಹೇಳಿದನು. ಕೋರ್ಟಿನವರು ಒಪ್ಪಲಿಲ್ಲ. ಬಲಗೈ ಎತ್ತುವ ಪದ್ಧತಿಯನ್ನು ಜಾರಿಗೆ ತಂದರು

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ಕಾರ್ಯಬಾಹುಳ್ಯವು ಹೆಚ್ಚಾಗಿ ಮನಸ್ಸಿನಲ್ಲಿ ಚಂಚಲತೆ, ಅಧೈರ್ಯ. ಯಕ್ಷ ಕಾರ್ಯಗಳು ತಕ್ಕಮಟ್ಟಿಗೆ ಕೈಗೂಡುವವು. ಹಣಕಾಸಿನ ಬಿಕ್ಕಟ್ಟು ಜೋರಾಗದೆ, ಬಂಧುಮಿತ್ರರ ಸಹಾಯವಿದೆ.

ವೃಷಭ

ಭಾರಿ ಕೆಲಸಕಾರ್ಯಗಳಲ್ಲಿ ಕೈಹಾಕುವ ಯೋಚನೆ, ದೊಡ್ಡವ್ಯವಸ್ಥೆಯ ಪ್ರಯತ್ನ. ದುಡ್ಡುಕಾಸಿನ ತಾಪತ್ರಯ ಸ್ವಲ್ಪ ತಗ್ಗುವುದು.

ಮಿಥುನ

ಕೆಲಸಕಾರ್ಯಗಳು ಯಶಸ್ವಿಯಾಗಿ ನಡೆಯ ಕೀರ್ತಿ ಹಣ ಗಳಿಸುವ ಕಾಲವಾಗಿದೆ. ಮನಸ್ಸಿನಲ್ಲಿ ಆಲೋಚನೆಗಳು ಅವರಿಸಿದ್ದರೂ ಸುಖಕ್ಕೇನೂ ಭಂಗವಿಲ್ಲ.

ಕರ್ಕಾಟಕ

ಧನಾಗಮನವಿದೆ. ಬಂಧುಮಿತ್ರ ಸಹಾಯವಿದೆ.

ಸಿಂಹ

ಹುಷಾರಿನಿಂದಲೇ ವರ್ತಿಸಿ. ಜನಂಲ್ಲಿ ಮನಸ್ಸಾಪಕ್ಕೆ ಹೋಗದೆ ನಿಮ್ಮ ಪಾಡನ್ನು ನೀವು ನೋಡಿಕೊಳ್ಳಿ.

ಕನ್ಯಾ

ನೀವೇನೂ ಅಳಬೇಕಾಗಿಲ್ಲ. ಅನುಕೂಲಗಳೊದಗುವ ಕಾಲ. ವಿಚಾರವಿಮರಾಗಿದ್ದಷ್ಟೂ ಒಳ್ಳೇದು.

ತುಲಾ

ಯತ್ನಕಾರ್ಯಗಳು ಕೈಗೂಡುವವು. ಸ್ವಲ್ಪ ಸುಖಶಾಂತಿಗೆ ಅವಕಾಶವಿದೆ. ದೊಡ್ಡಿನ ಒದ್ದಾಟವು ತಕ್ಕಮಟ್ಟಿಗೆ ಇಳಿಯುವುದು.

ವೃಶ್ಚಿಕ

ಅನಾನುಕೂಲಗಳೇನೂ ಅಷ್ಟು ಹೆಚ್ಚಿಲ್ಲ. ಅನುಕೂಲಗಳೂ ತಕ್ಕಮಟ್ಟಿಗಿನ, ವ್ಯಾಪಾರ ಉದ್ಯೋಗ ಚೆನ್ನಾಗಿ ನಡೆಯುವದು,

ಧನು

ಸ್ವಲ್ಪ ಹಣ ವಿಷ್ಮಯವಿ. ಸಂಸಾರದಲ್ಲಿ ಸುಖ ಕಡಮೆ. ಬಂಧುಮಿತ್ರರು ಹಿತರಾಗಿರಲಾರರು.

ಮಕರ

ಖರ್ಚು ಹೆಚ್ಚಾಗಿದೆ, ಸ್ವಪರಜನರಲ್ಲಿ ಚಿಕ್ಕಿಪುಟ್ಟ ಮನಸ್ತಾಪ. ಒಟ್ಟಿನಲ್ಲಿ ಒಳ್ಳೇದೇ ಹೆಚ್ಚು.

ಕುಂಭ

ಅಷ್ಟೇನೂ ಅನುಕೂಲ ಕಾಲವಲ್ಲ, ಮಿಶ್ರ ಫಲ ನಡೆಯುವದು.

ಮೀನ

ಸ್ಥಿತಿಗತಿಗಳು ಉತ್ತಮವಾಗುತ್ತವೆ, ಆದರೂ ಚಿಂತೆ ಅವರಿಸಿದೆ.

ಟ್ಯೂನಿಸ್ ಬಸರ್ಟಾಗಳಲ್ಲಿ ಮಿತ್ರ ಸೈನ್ಯಗಳು ಧಾಳಿ ಪ್ರಾರಂಭಿಸಿವೆ ಉತ್ತರದಲ್ಲಿ ಜರ್ಮನರು ಪೂರ್ತಾ ಹಿಮ್ಮೆಟ್ಟಿ ಇಜ್ಜಾಗವಾಗಿರುತ್ತಾರೆ. ಮಿಕಾಲ್ಟ ಗ್ರಾನವು ಶತ್ರುಗಳ ಕೈಬಿಟ್ಟಿದೆ. ಜಲ್ ಬಾಬ್‌ಗೂ, ಟೆಬರ್ಬಾವಿಗೂ ಮಧ್ಯೆ ಇರುವ ಹಿಂದು ಮುಖ್ಯ ಬೆಟ್ಟವು ಬ್ರಿಟಿಷರ ಕೈಸೇರಿತು.

ಅರಕಾರಣಕ್ಷೇತ್ರದಲ್ಲಿ ಜಪಾನೀಯರು ಮಿತ್ರಸೈನ್ಯದ ನಡುವೆ ನುಗ್ಗಿದವು. ಮಿತ್ರಸೈನ್ಯಗಳು ಶತ್ರುಸೈನ್ಯಗಳನ್ನು ಅಟ್ಟಿಸಿಕೊಂಡು ಹೋಗುತ್ತಿವೆ.

ಕ್ರೀಟಿನ ಹತ್ತಿರವಿರುವ ವಿಜಿಯ ಪ್ರದೇಶದಲ್ಲಿ ಶತ್ರುಗಳ ಅನೇಕ ಹಡಗುಗಳು ನಾಶವಾದವು.

ಬ್ರಿಟಿಷ್ ಮಂತ್ರಿಮಂಡಲಿಯಲ್ಲಿ ಬದಲಾವಣೆಯಾಗುವುದೆಂದು ತಿಳಿಯುತ್ತದೆ.

ನೋವ್ಗೋರೊಸಿಸ್ಕಿಗೆ 5 ವೈಲಿಯಲ್ಲಿರುವ ಜರ್ಮನರು ಒಂದಿರುವರು. ಶತ್ರುಗಳ ಪ್ರತಿಧಾಳಿಗಳೆನ್ನೆಲ್ಲಾ ರಷ್ಯನರು ಹಿಮ್ಮೆಟ್ಟಿಸಿರುವರು. ನೀಪ್ರೋಪೆಟ್ರೋವ್ಸ್ಕ ಬ್ರಿಯಾಜ್ಕ ಮೇಲೆ ರಷ್ಯನರು ಧಾಳಿಮಾಡಿ ಶತ್ರುಗಳುತಪ್ಪಿಸಿಕೊಂಡುಹೋಗದಂತೆ ಮಾಡಿರುವರು ಕ್ರಿಮಿಯಾದಲ್ಲಿ ರಷ್ಯನ್ ವಿಮಾನಧಾಳಿ ಮಾಡುತ್ತಿರುವುದರಿಂದ ಜರ್ಮನಿಯವರಿಗೆ ಸಾಮಗ್ರಿಯನ್ನು ತರಿಸಿಕೊಳ್ಳುವುದು ಕಷ್ಟವಾಗಿದೆ.

ಬಲ್ಗೇರಿಯ ತೀರವಲ್ಲಿ ಮಾತ್ರ ಲಾ ಏರ್ಪಾಡಾಗಿದೆ. ಬುಧವಾರದಿಂದ ಬಲ್ಗೇರಿಯ ತುರ್ಕಿ ಗಡಿಯನ್ನು ನುಚ್ಚಿರುತ್ತಾರೆಂದು ವರ್ತಮಾನ ಬಲ್ಗೇರಿಯವು ರಣಕ್ಷೇತ್ರವಾಗಿದೆ. ಜರ್ಮನ ಪಿಪಾಯಿಗಳು ಬರುತ್ತಲೇ ಇದ್ದಾರೆ

ಸ್ಟ್ಯಾಂಡರ್ಡ್ ಬಟ್ಟೆಯನ್ನು ವೈಸೂರಿನ ಮಿಲ್ಲುಗಳಲ್ಲಿಯೂ ಸರ್ಕಾರದವರು ತಯಾರುಮಾಡಿಸುವರೆಂದು ತಿಳಿಯುಬಂದಿದೆ.

ಜಪಾನೀಯರು ಏಪ್ರಿಲ್ 28 ರಲ್ಲಿ ಹಿಡಿದುಕೊಂಡಿದ್ದ ಸೊಯಾ ದೀಪವನ್ನು ಚೀನೀಯರು ಮತ್ತೆ ಹಿಡಿದರು.

ಶ್ರೀ ಓಂ ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಷೇಪಕರವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಈ ಮಾಸದ ಕಥೆ.

ಓದು ಗೂಟವನ್ನಿಡುವುದೇ ?

(ಕಳೆದ ವಾರದ ಸಂಚಿಕೆಯಿಂದ ಮುಂದುವರಿದುದು)

ಸದಾಶಿವನ ಮೋರೆಯ ಚಂದ್ರನಂತೆ ಶೋಭಿಸುತ್ತಿತ್ತು. ಶರೀರ ಕಾಯೆಯು ಗೌವರ್ಣವಾಗಿತ್ತು. ಪಾಠಶಾಲೆಗೆ ಸೇರಿದಂದಿನಿಂದ ವಿದ್ಯಾರ್ಜನೆಯಲ್ಲಿ ತನ್ನ ಸಹಪಾಠಿಗಳನ್ನು ಮೀರಿಸಿದ್ದನು.

ಒಂದು ದಿನ ಸದಾಶಿವನಿಗೆ ಜ್ವರ ಬಂತು, ಔಷಧಿಯನ್ನು ಕುಡಿದರು. ಪುನಃ ಕುಡಿಸಿದರು. ಎಷ್ಟೋ ಮಂದಿ ವೈದ್ಯರುಗಳು ಒಂದು ಯಾವುದೋ ಔಷಧಿಗಳನ್ನು ಕೊಟ್ಟರು. ಜ್ವರವು ಸ್ವಲ್ಪ ಮಾತ್ರವೂ ತಗ್ಗಲಿಲ್ಲ ಪಾರ್ವತಮ್ಮನಿಗೆ ಭಯ. ತಾನು ಹಿಂದೆ ದರ್ಶನಮಾಡಿದ್ದ ದೇವತೆಗಳನ್ನೆಲ್ಲ ನಿನಪಿಗೆ ತಂದುಕೊಂಡಳು. ಜ್ವರತ ತಗ್ಗದಲ್ಲಿ ಹೀಗೆ ಮಾತಾಡಿನೆಂದು ಜೇಡಿಕೊಂಡಳು. ಸದಾಶಿವನನ್ನು ನೋಡಿಕೊಂಡು ಹೋಗಲು ಮುದಿ ಮುತ್ತೈದೆಯರೂ ದೊಡ್ಡ ಮನುಷ್ಯರೂ ಬಂದು ಹೋಗುತ್ತಿದ್ದರು. ಅಲ್ಲಿ ಒಬ್ಬಳು "ಏನಮ್ಮಾ ಇದು ಜ್ವರಂತೆ ಇಷ್ಟು ಅಮ್ಮನವರಂತೆ ಕಾಣುತ್ತೆ" ಎಂದಳು. ಆದರೂ ಆಗಿರಬಹುದೆಂಡು ಮತ್ತೊಬ್ಬಳು ಲೆಂದು ಹೀಗಾಗಿರುವುದು ಓದಿನಿಂದ, ನನ್ನ ಮಾತು ಕೇಳಿ ಎಂದ ಇನ್ನೊಬ್ಬಳು ಹೇಳಿದಳು ಹಾಗೂ ಇರಬಹುದೆಂದು, ಮತ್ತೊಬ್ಬಳೆಂದಳು. ವೆಂಕಯ್ಯನಿಗೆ ಹುಚ್ಚಾ, ಏಕೆ ಈ ಓಡು, ನಿಲ್ಲಿಸುವುದೆಂದು ಹೇರಿಸಿಕೊಳ್ಳಿ" ಎಂದೂ ಇತರರು ಹೇಳಿದರು.

ಕ್ರಮೇಣ ಜ್ವರ ತಗ್ಗಿತು. ಒಂದು ತಿಂಗಳೊಳಗಾಗಿ ಸದಾಶಿವನು ಆರೋಗ್ಯವಂತನಾದನು. ಒಂದು ದಿನ ವೆಂಕಯ್ಯನು ಹೆಂಡತಿಯನ್ನು ಕರೆಯಮ್ಮ ಗುರುಗೆ ಈಗ ಶರೀರಾರೋಗ್ಯವು ಸಮಯಾಗಿದೆ ಪುನಃ ಓದಲು ಕಳುಹಿಸಲೇ ಎಂದನು. ಓಮ್ಮೊಬೇಡ ಗೀದೂ ಬೇಡ ಈ ಪ್ರಪಂಚದಲ್ಲಿ ಎಲ್ಲರೂ ಓದಿಯೇ ಬದುಕಿಸುವರೇ ? ಕಣ್ಣು ಮುಂಚೆ ಹೀಗೇ ಇರಲಿ ಓದಿದರೆ ಪುನಃ ಅನಾರೋಗ್ಯವಾಗಿ ಬರುವುದು ಎಂದು ತಿಳಿಸಿದನು. ಮಗನು ಜ್ವರದಿಂದಿದ್ದಾಗ ಆತನು ಓದು ಇಲ್ಲದಿದ್ದರೆ ಹೋಗಲಿ ಎಂದೆಂದುಕೊಂಡರೂ ವಿವೇಕವಂತನಾದುದರಿಂದ ಪ್ರಪಂಚದಲ್ಲಿ ನಡೆಯುವ ಪ್ರತಿ ಬದಲಾವಣೆಯೂ ದೈವ ಯತ್ನದೊಂದಿಗೆ ಕೂಡಿರುತ್ತದೆ. ಪ್ರತಿ ವಿಷಯಕ್ಕೂ ಭಗವಂತನಡಕೂಡದು. ಓದಿದರೆ ಸಾಯುವನೆಂದು ಅಂಜುವುದು ಮೂಢತನ ಎಂದು ಹೆಂಡತಿಗೆ ಸಮಾಧಾನಪಡಿಸಿ ಪುನಃ ಮಗನನ್ನು ಪಾಠಶಾಲೆಗೆ ಕಳುಹಿಸಿದ್ದಾ ಒಂದನು.

ವಾಕ್ಸಪಿಕ ವಿದ್ಯೆಯು ಪೂರ್ತಿಯಾಯಿತು. ಸದಾಶಿವನ ಸೂಕ್ಷ್ಮ ಬುದ್ಧಿ ಉಪಾಧ್ಯಾಯರು ಸಂತೋಷಗೊಂಡು ಇಂಗ್ಲೀಷ್ ಪಾಠಶಾಲೆಗೆ ಕಳುಹಿಸಲು ತಂದೆಗೆ ತಿಳಿಸಿದರು. ವೆಂಕಯ್ಯನಿಗೆ ಹಾಗೆ ಮಾಡಲು ಇಷ್ಟವಿದ್ದರೂ ಬರುವ ಅಲ್ಪ ಆದಾಯದಲ್ಲಿ ಕುಟುಂಬ ಪೋಷಣೆಯೂ, ವಿದ್ಯಾಭ್ಯಾಸ ಎರಡೂ ಸಡೆಯಬಲ್ಲುದೇ ಎಂದು ಯೋಜನೆಯಲ್ಲಿ ಪಡ್ಡನು. ಕೊನೆಗೆ ಏನಾದರೂ ಆಗಲಿ ಎರಡು ಎಕರೆ ಜಮೀನನ್ನು ಮಾರಾದರೂ ಸರಿಯೆ ಮಗನನ್ನು ಓದಿಸಲೇಬೇಕೆಂದೂ ನಿಶ್ಚಯಿಸಿಕೆದಂಡು ಹೆಂಡತಿಯ ಒಪ್ಪಿಗೆಯನ್ನು ಪಡೆದು ಸದಾಶಿವನನ್ನು ಇಂಗ್ಲೀಷು ಪಾಠಶಾಲೆಗೆ ಸೇರಿಸಿದನು.

ಶಂದೆತಾಯಿಗಳನ್ನೂ ಸ್ವಗ್ರಾಮವನ್ನೂ ಬಿಟ್ಟು ವಿದ್ಯಾಭ್ಯಾಸಕ್ಕಾಗಿ ಪಾಠಶಾಲೆಯನ್ನು ಪ್ರವೇಶಿಸಿ ವಿಶೇಷ ಧನವನ್ನು ವ್ಯಯಮಾಡುತ್ತಾ, ದುಷ್ಪಹವಾಸ ದುರ್ವ್ಯಯಗಳನ್ನು ಮಾಡುತ್ತಾ, ಕಾಲವನ್ನು ವೃಥಾ ಕಳೆದು, ಪರೀಕ್ಷೆಯಲ್ಲಿ ದೇರ್ಗಡೆಯಾಗದಿರುವ ಹುಲವು ಮಂದಿ ಸೋಮಾಡಿ ವಿದ್ಯಾರ್ಥಿಗಳಂತಲ್ಲದೆ- ಸದಾಶಿವನು ಸದಾ ಪಾಠಗಳ ಮೇಲೆ ತನ್ನ ದೃಷ್ಟಿಯನ್ನಿಟ್ಟು ಪ್ರತಿ ವರ್ಷವೂ ತಪ್ಪದೇ ತೇರ್ಗಡೆಯಾಗುತ್ತಿದ್ದನು, ಆತನ ಸತ್ಪ್ರವರ್ತನೆಯೂ, ವಿದ್ಯಾಸಕ್ತಿಯೂ ಪಾಠಶಾಲೆಯ ಉಪಾಧ್ಯಾಯರ ದೃಷ್ಟಿಯನ್ನೂ ಆಕರ್ಷಿಸಿತು.

ಸ್ವಲ್ಪವಾಗಲೀ, ಸಾಮಾನ್ಯವಾಗಲೀ ಭರಿಸಲಾಗದ ಅಧಿಕ ವ್ಯಯದೊಂದಿಗೆ ಕೂಡಿದ ಆಂಗ್ಲ ವಿದ್ಯಾಭ್ಯಾಸವು ಸದಾಶಿವನಂಥವರಿಗೆ ಕಷ್ಟವಾಗಿಲ್ಲದೆ ಸರಿದು ಎಷ್ಟು ವಿಧದಿಂದ ವ್ಯಯವಾಡಿತ್ತಿದರೂ ಮಗನ ವಿದ್ಯೆಗಾಗಿ ವೆಂಕಯ್ಯನು ಒಂದು ಎಕರೆ ಜಮೀನನ್ನು ಮಾರಬೇಕಾಯಿತು.

ಆ ಗ್ರಾಮಸ್ಥರೆಲ್ಲಾ "ಏಕೆ ವೆಂಕಯ್ಯ, ಓದು. ಓದಿನಿಂದ ಉಪ್ಪೋಗವು ಸಿಗುವುದೇ ? ಏಕೆ ಜಮೀನನ್ನು ಮಾರುವಿ ? ಎಂದು ಸಲಹೆಯನ್ನು ಕೊಟ್ಟರೂ, ವೆಂಕಯ್ಯನು ತನ್ನ ಪ್ರಯತ್ನವನ್ನು ಬಿಡಲಿಲ್ಲ. ಆ ವರ್ಷವೇ ಸದಾಶಿವನು ಎಂಟ್ರೆನ್ಸ್ ಪರೀಕ್ಷೆಯಲ್ಲಿ ಉತ್ತೀರ್ಣನಾದನು. ಇನ್ನೇನು ದೊಡ್ಡ ಉದ್ಯೋಗ ಸಿಗುವುದೆಂದೂ ಸರ್ಕಾರದ ಮನುಷ್ಯನಾಗುವನೆಂದೂ, ಆ ಗ್ರಾಮಸ್ಥರೆಲ್ಲರೂ ಅನುಕೂಲಾಲೋಚನೆ ಮಾಡಿದರು. ಸದಾಶಿವನು ಇಂಟರ್‌ಮೀಡಿಯೆಟ್ ಕ್ಲಾಸಿನಲ್ಲಿ ಓದಲುಪಕ್ರಮಿಸಿದನು.

(ಸಶೇಷ)

ಕಲಿಯುಗಾಂತ್ಯವೇ ?

ಸೂರ್ಯ ಸಿದ್ಧಾಂತಕರ್ತನ್ನು ಈ ಮಾತು ಸುಳ್ಳು. ಜ್ಯೋತಿಷ ನಿಗ್ರಂಥ ಕರ್ತನ್ನು ಈ ಮಾತು ದಿಟ. ಇಬ್ಬರ ವಚನಗಳನ್ನು ಸುಳ್ಳೆಂದು ನುಡಿಯಲಾಗದು. ಹಾಗಿದ್ದಲ್ಲಿ ಈ ನುಡಿಗಳ ಗೂಢಭಾವವೇನೆಂದಲ್ಲಿ ಸಮಾಧಾನ.- ಯುಗಾಂತ್ಯ ಕಾಲವೆಂದಲ್ಲಿ ಒಂದು ಪ್ರಳಯಕಾಲ. ದೈನಂದಿನ ಪ್ರಳಯ ಮಹಾಪ್ರಳಯಗಳಂತೆ ಇದು ಯುಗಪ್ರಳಯವೆನ್ನಬಹುದು. ಜ್ಯೋತಿಷನಿಯಮಂತೆ 1-8-43 ಯುಗಪ್ರಳಯ ದಿನ. ಯಾವಾಗ ಪ್ರಳಯವಾಗುವುದೆಂದರೆ ಆಗಾಗ ಕಾಲಕ್ಕೆ ನಿಮಾನಗಳೇ ಅಧಿಯಾಗಿ ಪ್ರಳಪ್ರಳಾಂಕರಗಳಿಗೆ ಅತಿ ಸುಲಭವಾಗಿ ಗಮಿಸಲು ಅನುಕೂಲವಾದ ಸಾಧನಗಳು. ಹೆಚ್ಚುವುದೋ ಆಗ ಹೀಗಾಗುವುದು. ಪ್ರಳಯವೆಂದರೆ ಸ್ಥೂಲ ದೃಷ್ಟಿಗೆ ಕಾಣಬರುವಂಥದ್ದೇ ಕಾಣಬಂದಂತಾಗುವುದು. ಮಾತ್ರವೇ, ಉದಾಹರಣೆಯಾಗಿ- ಒಂದು ಭೂಭಾಗವು ಜಲಪ್ರಳಯವಾಗಬೇಕಾದ ಕಾಲವು ಸನ್ನಿಹಿತವಾದಾಗ ಬೇರೊಂದು ಭಾಗದಲ್ಲಿ ಬಂದು ಹೊಸಭೂಭಾಗವು ಸಮುದ್ರಗರ್ಭದಿಂದ ಮೇಲಕ್ಕೆ ಕಾಣಿಸಿಕೊಳ್ಳುವುದು, ಪ್ರಳಯವಾಗುವ ಭೂಭಾಗದಲ್ಲಿಯ ಜನರು ವಿಮಾನಾದಿ ವಾಹನಗಳ ಮೂಲಕ ಆ ಹೊಸಭಾಗಕ್ಕೆ ಗಮಿಸುವರು. ಪ್ರಳಯ ಭೂಭಾಗದ ಜನರು ತಮ್ಮ ವಸ್ತು ಸಮಾರ್ಥಗಳೊಂದಿಗೆ ಹೊಸ ಭೂಭಾಗಕ್ಕೆ ಹೋಗಿ ಸೇರಿದೊಡನೆಯೇ ಹಳೆ ಭೂಭಾಗವು ಜಲಗರ್ಭದಲ್ಲಿ ಲೀನವಾಗುವುದು. ಹೀಗೆಯೇ ಅನೇಕ ಕೋಟಿ ವರ್ಷಗಳಿಂದ ಈ ಸೃಷ್ಟಿಯಲ್ಲಿ ಸೃಷ್ಟಿಪ್ರಳಯ ಕಾರ್ಯಗಳು ನಡೆಯುತ್ತಿರುವುವು.

1-8-43 ನೇ ದಿನ ಕೂಡ ಪ್ರಪಂಚದಲ್ಲಿ ಯಾವುದೋ ಒಂದು ಭೂಭಾಗವು ಪ್ರಳಯ ಹೋದಿ ಒಂದು ಹೊಸಭಾಗವು ದೃಗ್ಗೋಚರವಾಗುವುದು, ಈ ದೃಷ್ಟಿಯಲ್ಲಿ ಜ್ಯೋತಿಷಿಯ ವಚನವು ಕೂಡ ಸತ್ಯವೇ. ಕಲಿಯುಗಾಂತ್ಯ ದಿನವೆಂದೂ ಆ ಗ್ರಂಥಕರ್ತರು ಒಪ್ಪಿದ್ದುದನ್ನು ಮಾತ್ರ ಸತ್ಯಕ್ಕೆ ದೂರವಾದ ನುಡಿಯೆಂದು ಹೇಳಬೇಕಾಗಿಲ್ಲ. ಅಂತೂ 1-8-43 ಒಂದು ಮಹಾ ಪರ್ವದಿನ. ಆ ದಿನ ಎಲ್ಲರೂ ಭಗವತ್ಕೈಂಕರ್ಯ ಸಂಬಂಧವಾದ ಕಾರ್ಯ ಕಲಾಪಗಳಲ್ಲಿ ನಿಶ್ಚಿತತ್ಪರರಾಗಿರಬೇಕಾದುದು ಅತ್ಯವಶ್ಯಕವಾಗಿರುತ್ತದೆ. (ಓಂ)

ಸ್ವಾತಂತ್ರ್ಯತೆಯ ಸೊಬಗೇ ಸೊಬಗು

ರಾಮಮೋಹನರಾಯರು ಇಷ್ಟ ಅಂತ್ಯದೆಶೆಯಲ್ಲಿ ಇಂಗ್ಲೆಂಡಿಗೆ ಪ್ರಯಾಣಬೆಳೆಸಿದರು. ಆ ಪ್ರಯಾಣದಲ್ಲಿ ನಡೆದ ಈ ಕಳಗಿನ ಸಂಘಟ್ಟನೆಯಿಂದ ಅತನಿಗಿದ್ದ ಸ್ವಾತಂತ್ರ್ಯೇಚ್ಛೆಯು ವ್ಯಕ್ತವಾಗುವುದು. ಗುಡ್‌ಹೋಪ್ ಭೂಶಿರದ ಹತ್ತಿರ ಸ್ವಾತಂತ್ರ್ಯದ ಧ್ವಜವೊಂದಿಗೆ ಮೆರೆಯುತ್ತಿದ್ದ ಒಂದು ಫ್ರೆಂಚ್ ಹಡಗು ರಾಮಮೋಹನನ ದೃಷ್ಟಿಯನ್ನಾಕರ್ಷಿಸಿತು. ಕೂಡಲೆ ಅತನು ತನ್ನ ಹಡಗಿನಿಂದ ಫ್ರೆಂಚರ ಹಡಗಿಗೆ ತನ್ನನ್ನು ಕರೆದುಕೊಂಡು ಹೋಗಬೇಕೆಂದು ನಾವಿಕರಿಗೆ ಬಲವಂತಪಡಿಸಿದನು ಅತನು ಫ್ರೆಂಚರ ಹಡಗನ್ನು ಹತ್ತಿ ಸ್ವಾತಂತ್ರ್ಯ ಧ್ವಜವನ್ನು ಕಂಡು ಮುಗ್ಧನಾಗಿ "ಸ್ವಾತಂತ್ರ್ಯ ಪತಾಕೆಕೀ ಜೈ ಜೈ ಜೈ" ಎಂದು ಮೂರು ಬಾರಿ ಘಟ್ಟಿಯಾಗಿ ಜಯಧ್ವನಿಯನ್ನು ಮಾಡಿದನು. ಹೀಗೆಂದು ಶ್ರೀ ಪಟ್ಟಾಭಿರಾಮಯ್ಯನವರು ಪತ್ರಿಕೆಗಳಲ್ಲಿ ಬರೆಯುತ್ತಾರೆ.

ನಾಜಿ ಗೆಸ್ಟಾಪೊ ಮುಖಂಡನಾದ ಹಿಮ್ಲರ್ ಮ್ಯಾಡ್ರಿಡ್ಡಿಗೆ ಹೋಗಿದ್ದು ಜನರಲ್ ಫ್ರಾಂಕೋ ಮೇಲೆ ಒತ್ತಾಯ ಮಾಡಿ, ಪೋರ್ಚುಗಲ್ ಮುಖ್ಯಮಂತ್ರಿಗೂ, ಸ್ಪೇನಿನ ವಿದೇಶ ಮಂತ್ರಿಗೂ ಮಾತುಕತೆ ನಡೆಯದಂತೆ ಮಾಡಲು ಪ್ರಯತಿಸಿದನು. ಫ್ರಾಂಕೋ ಹಿಮ್ಲರಿಗೆ ಸಂದರ್ಶನವನ್ನೇಯಲು ನಿರಾಕರಿಸಿದನು !

ಫ್ರಾನ್ಸಿನಲ್ಲಿ ದಸ್ಯಗಿರಿಗಳು— ಅಲ್ಲಲ್ಲಿ ಹೊಸ ಕಾರ್ಯಕ್ರಮದಂತೆ ಈಗಾಗಲೇ ಫ್ರಾನ್ಸಿನಲ್ಲಿ 1500 ಜನರು ದಸ್ಯಗಿರಿ ಮಾಡಲ್ಪಟ್ಟಿರುವರು. ಇವರೆಲ್ಲಾ ವಿಚಿ ಮಂಡಲಿಯವರ ಸಹಾನುಭೂತಿಯುಳ್ಳವರಾಗಿರುವರು.

ದೇಶಾಭಿಮಾನ ಸ್ವಾಭಿಮಾನ

ಇವುಗಳೆರಡರ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯ

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಮೊಬಲಗಿಗೆ ಸರ್ಕಾರದ ಹುಟ್ಟುವಳಿಯೇ ಆಧಾರ

ವಿಮೆಯಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಮಾಡಲಾಗುವುದು

ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರಾತಿನಿಧ್ಯವುಂಟು

ಪಾಲಿಸಿಕ್ಕೆ ಪಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,
ಮೈಸೂರು ಸರ್ಕಾರದ ಜೀವವಿಮೆ ಇಲಾಖೆ
ಬೆಂಗಳೂರು.

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವನ್ನು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು

TG. ಮಾರ್ಕಿನ ಹಿಂಗನ್ನು
ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ಸಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು, ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲಿ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, **ಮದರಾಸು.**

At..... New Opera Talkies

Only for 5 days from 8—5—43

COURT DANCER

— First Indian Film with Dialogues in English —

ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ

Edited, Printed & pnblished by M. S. Krishna Rao, at the Satyavadi Press. Chamaraja Mohalla, Mysore.

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ ತಯಾರಿಕೆ

ವಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, **ರತ್ನ, ಪಂಡರೀಬಾಯಿ, ಧನಭಾಗ್ಯಂ** ಎ. ನಾರಾಯಣರಾವ್, ಕೆ. ಎಂ. ಮಹದೇವಕ್, **ಮಾಸ್ಟರ್ ಬಿ. ವಿ. ಕೆ. ಮೂರ್ತಿ** ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. **ರಾಮಯ್ಯನವರು**
ಸಂಗೀತ ನಿರ್ದೇಶಕರು— ಸಂಗೀತರತ್ನ **ಟಿ. ಚೌಡಯ್ಯನವರು**
ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್.
ಸ್ಟುಡಿಯೊ—ಸೆಂಟ್ರಲ್ ಸ್ಟುಡಿಯೋಸ್ ಲಿಮಿಟೆಡ್, ಕೊಯಮತ್ತೂರು

For All Kinds of
Printing & Binding

The Satyavadi Press

Chamarajapuram
Mysore

SHAKTI SUDHA

A Panacea for All Debilites

ಶಕ್ತಿ ಸಾಧನೆಗೆ
ಸುಲಭೋಪಾಯವು

ಶಕ್ತಿಸುಧಾ

ಸೇವನೆ ಎಂಬುವುದು

ನಿಮ್ಮ ಜ್ಞಾಪಕದಲ್ಲಿರಲಿ

ಬೆಲೆ 1 ರೂಪಾಯಿ

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ.
ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ.

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

ಅಕ್ಕರ

ಸಾಮಾಜಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್ ಮೈಸೂರು

ಮೈಸೂರು ವೈಶ್ಯ ಪತ್ರಿಕೆ

ಈ ಉತ್ತಮ ಸಚಿತ್ರ ಕನ್ನಡ-ತೆಲುಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ವಾರ್ಷಿಕ ಚಂದಾ ರೂ. 3-0-0

ಬಿಡಿ ಪ್ರತಿ 4 ಆಣೆ.

ಹಿಗ್ಗಿಬಾಥಮ್ಸ್ ರೈಲ್ವೆ ಬುಕ್‌ಸ್ಟಾಲ್‌ಗಳಲ್ಲಿಯೂ ಪತ್ರಿಕೆಯು ತೊರೆಯುತ್ತೆ.

ಕಾರ್ಯಾಲಯ ;
ಶ್ರೀ ವಾಸವಾಂಬ ಭವನ
ಅಶೋಕ ರಸ್ತೆ — ಮೈಸೂರು

ಪಿ. ಮಂಜಪ್ಪ ಮರ್ಚೆಂಟ್
ಕಳೇ ಅಗ್ರಹಾರ, ಮೈಸೂರು
ಇ[illegible]ತ್ಮಾದಿ ಪಡೆಯಬಹುದು

ಕೋರಿಯಾದಿಂದ ಜಪಾನಿಗೆ ಸುರಂಗ ಮಾರ್ಗ

ಸೌಕರ್ಯ ಅಭಾವದಿಂದ ಜಪಾನಿಯರು ಕ್ಯಲಾಮಪಟ್ಟಿಗೆ ರೈಲಿನಲ್ಲಿ ಸಾಮಾನುಗಳನ್ನು ಸಾಗಿಸುತ್ತಿರುವರು. ಕೈ ಮಜೋಷಧ ದ್ವೀಪಗಳು ಈಗ ಸಮುದ್ರದಲ್ಲಿ ಸುರಂಗ ಮಾರ್ಗ ಮಾಡಿರುವರು. ಕೋರಿಯಾಕ್ಕೂ ಜಪಾನಿಗೂ 120 ಮೈಲಿ ಸಮುದ್ರದಲ್ಲಿ ಸುರಂಗ ಮಾರ್ಗ ಮಾಡುವರಂತೆ. ಇಂಜಿನ್ ಹೈನ ದಿಂದ ಪಿಂಗಪ್ಪೂರಿಗೆ ರೈಲ್ವೆಮಾರ್ಗಗಳು ಇಲ್ಲದ ಕಡೆಗಳಲ್ಲಿ ಹೊಸದಾಗಿ ನಿರ್ಮಾಣಮಾಡುವರು.

ಬಣ್ಣದ ಮನುಷ್ಯರ ಹಾಡು

ಕಳೆದ ವಾರ ಲಂಡನ್ನಲ್ಲಿ ಬಂದು ಸಭೆ ಸೇರಿತು. ಈಗ ಎಲ್ಲೆಲ್ಲೂ ಕಪ್ಪು ಮನುಷ್ಯರನ್ನು ತುಳಿಯ ಬೇಕೆಂದಿರುವರನ್ನು ಮಿಂಡಿಸುವುದೇ ಈ ಸಭೆಯ ಉದ್ದೇಶವಾಗಿತ್ತು. ಇದಕ್ಕೆ ಜೇಂಮ್ಸ್ ಮಿ|| ಜೂಟ್ ಇಂಗ್ಲೆಂಡಿನಲ್ಲಿ ಹೆಸರುವಾಸಿಯಾದ ಗಂಭೀರ್ತಕರ್ತರು. ಇಂಗ್ಲೆಂಡಿನಲ್ಲಿ ಟ್ರ್ಯಾಗೂರ್ ಸೊಸೈಟಿಯಿಂದ ಹಿಂದೂಸ್ಥಾನ ಪ್ರತಿನಿಧಿಯಾಗಿ ಶ್ರೀಮತಿ ಜೆ. ಬಿ. ರಾಮಚಂದ್ರನವರನ್ನು ಕಳುಹಿಸಿದ್ದರು. ಇವರು ದಕ್ಷಿಣ ಆಫ್ರಿಕಾದ ಪರಿಸ್ಥಿಯನ್ನು ಮನಸಾರೆ ಮಾಡಲು ಮಿ||ಜೂಟರು ಅವಕಾಶ ಕೊಡಲಿಲ್ಲ. ಈ ಸಭೆಯು ಯೂರೋಪಿನಲ್ಲಿ ಬಣ್ಣದ ಮನುಷ್ಯರಿಗೆ ಕೊಡುತ್ತಿರುವ ತೊಂದರೆಯನ್ನು ತಪ್ಪಿಸಲು ಪ್ರಯತ್ನಿಸಲಾಗಿರುವುದೇ ವಿನಃ ಆಫ್ರಿಕಾದ ವಿಷಯ ಮಾತನಾಡಕೂಡದೆಂದರು.

ಹಿಂದೂಸ್ಥಾನ ವಿಭಾಗವಿಲ್ಲ

ಕರಾಚಿಯಲ್ಲಿ ನಡೆದ ಅಖಿಲ ಭಾರತ ಸಮ್ಮೇಳನದಲ್ಲಿ ಲಾಹೋರ್ ಲಾಲಾ ಕುಷಲ್ ಚಂದ್‌ರವರು, ಪಾಕಿಸ್ಥಾನ ಎಂಬುದು ಗಾಳಿಯ ಗೋಪುರದಂತೆ, ಅಖಿಲ ಭಾರತ ಇದೂ ಹೀಗೆಯೇ ? ಪಾಕಿಸ್ಥಾನ 1932 ರಲ್ಲಿ ರೌಂಡ್ ಟೇಬಲ್ ಕಾನ್ಫರೆನ್ಸ್‌ನಲ್ಲಿ ಜನ್ಮವೆತ್ತಿತ್ತು. ಆಗಿನಿಂದಲೂ ಗಲಾಟೆಯೂ ಸುಶಕ್ತವಾಗಿಯೇ ಇದೆ. ಹಿಂದೂಗಳು ಹಿಂದೂಸ್ಥಾನವನ್ನು ವಿಭಾಗ ಮಾಡಲು ಬಿಡಕೂಡದು ಕೊನೆಗೆ ಒಬ್ಬನು ಬಂದು ತನಿ ರಾಷ್ಟ್ರವಿವರೆಗೂ ಪಾಕಿಸ್ಥಾನವನ್ನು ಎದುರಿಸಬೇಕೆಂದೂ ಸಹ ಹೇಳಿದನು.

ಮೆಡಿಟರೇನಿಯನ್ ಸಮುದ್ರದಲ್ಲಿ ತುರ್ಕಿಗೆ ದಕ್ಷಿಣದಲ್ಲಿ ಕೀಟಾಗ ಉತ್ತರದಲ್ಲಿ ಸೈಪ್ರಸ್‌ಗೆ ಪಶ್ಚಿಮದಲ್ಲಿರುವ ಇಟಲಿಯವರ ರೋಡ್ಸ್ ದ್ವೀಪವನ್ನು ಜರ್ಮನಿಯವರು ತಮ್ಮ ಅಧಿಕಾರಕ್ಕೆ ತೆಗೆದುಕೊಂಡು ಸೈನ್ಯಗಳನ್ನೂ ಯುದ್ಧದ ಸಲಕರಣೆಗಳನ್ನು ತಂದಿರುತ್ತಾರೆಂದು ಹೇಳಲಾಗಿದೆ

ವರ್ತಮಾನ

ಬೊಂಬಾಯಿನಲ್ಲಿ ಟೆಲಿಫೋನ್ ಸೆಟ್ಟುಗಳು ಸಿಗದೆ ಬಹಳ ತೊಂದರೆಯಾಗಿದೆ ಬೇಕಾದವರು ವೃತ್ತಪತ್ರಿಕೆಗಳಲ್ಲಿ ಯಾರಿಗೆ ಬೇಡವೋ ಅದನ್ನು ಬೇಕಾದವರಿಗೆ ಒದಲಾಯಿಸಿದರೆ ಅದಕ್ಕೆ ಕಮೀಷನ್ ಇತ್ಯಾದಿ ಸಿಗುವುದೆಂದು ಪ್ರಕಟಿಸಿದ್ದಾರೆ.

ಜನರಲ್ ಜಿರೋರವರು ಜನರಲ್ ಡಿಗಾಲ್‌ರವರನ್ನು ಇದೇ ಮೇ ತಾ|| 5 ನೇ ಬುಧವಾರ ಅಲ್ಜಿಯರ್ಸ್‌ನಲ್ಲಿ ಭೇಟಿಮಾಡುವರೆಂದು ತಿಳಿಯಬಂದಿದೆ.

ಭಾರತಕ್ಕೆ ಬಂದಿದ್ದ ಚೀನಾ ವೈದ್ಯ ನಿಯೋಗಿಯವರು ಚುಂಕಿಂಗಿಗೆ ವಾಪಸ್ ತಲಪಿದರು.

ಟ್ಯುನಿಸಿಯಾ ರಣರಂಗಸೋಡಲು ಮಿ || ಜನ್ಸ್ಟಾದಾಸ್ ಮೇಥಾರವರು ಈಗ ಕರಾಚಿಗೆ ಹೋಗಿರುವರು.

ಪಾಕಿಫಿರಿ ಎಂಬ 70 ವರ್ಷದ ಮೋರಿಪುಟ್ಟದ ರಾಜನು "ವಯಸ್ಸಾದವನು ಬದಕುವುದಕ್ಕಿಂತ ಸಾಯುವುದೇ ನೇಲು" ಎಂದು ಹೇಳಿ ಕಾಡಿಗೆ ಹೋಗಿ ನೇಣುಹಾಕಿಕೊಂಡು ಪ್ರಾಣಬಿಟ್ಟನು

ರಷ್ಯಾದಲ್ಲಿ ಹಿಮಕರಗಿ ನೆಲವೆಲ್ಲಾ ಕೊಚ್ಚೆಯಾಗಿದೆ. ಯುದ್ಧ ಹೂಡಲು ಯಾರಿಂಗೂ ಆಗುವುದಿಲ್ಲ ರಷ್ಯಕ್ ವಿಮಾನಗಳು ಧಾಳಿಯನ್ನು ಮಾತ್ರ ಏಕ ಪ್ರಕಾರವಾಗಿ ಮಾಡುತ್ತಿವೆ. ಕೊಚ್ಚೆಯೆಲ್ಲಾ ಕಳಿಯುವವರೆಗೂ ಉಭಯತ್ರರೂ ಸನ್ನಾಹ ಮಾಡಿಕೊಳ್ಳುತ್ತಿರುವರು.

ಇದುವರೆಗೂ ಮೇ ತಿಂಗಳು 1 ರಲ್ಲಿ ಮೇ ದಿವಸವು ಪ್ರಪಂಚದಲ್ಲಿನ ಕೂಲಿಗಾರರಿಂದ ಮಾತ್ರ ಆಚರಿಸಲ್ಪಡಲಾಗುತ್ತಿತ್ತು. ಈಗ ಪ್ರಪಂಚದ ಕೂಲಿಗಾರರೇ ಒಟ್ಟಾಗಿರಿ ಎನ್ನುವುದಕ್ಕೆ ಬದಲು, ಪ್ರಪಂಚದ ಜನಾಂಗದವರೇ ಒಟ್ಟಾಗಿರಿ. ಎನ್ನುವ ಹಾಗಾಗಿಯಿತು.

ಸರ್ಕಾರಿ ನೌಕರರು ಸ್ಟೇಷನರಿ ಸಾಮಾನು, ಪ್ರಿಂಟಾದ ಫಾರಂ ಮುಂತಾದವನ್ನು ಹೆಚ್ಚಾಗಿ ಉಪಯೋಗಿಸಿದರೆ ಶಿಕ್ಷೆಗೆ ಗುರಿಯಾಗುತ್ತಾರೆಂದು ಆಸಂತ ಶಯನಸರಕಾರದ ಆಜ್ಞೆಯಾಗಿದೆ.

ಅಮೇರಿಕಾದ ಕಲ್ಲಿಜ್ಜಲು ಮಷ್ಕರವು 2 ವಾರದ ಮಟ್ಟಿಗೆ ನಿಂತಿದೆ. ಅಷ್ಟರಲ್ಲಿ ಸರಕಾರವು ವ್ಯವಸ್ಥೆಮಾಡುವುದು.

ವರ್ತಮಾನ ಸಂಗ್ರಹ

ರೈಲ್ವೆ ನೌಕರರ ಉಪಯೋಗಕ್ಕೆ 10 ಲಕ್ಷ ಗಜ ಕಮ್ಮೀ ದರದ ಒಟ್ಟಿಯನ್ನು ಕೊಡುವರೆಂದು ತಿಳಿಯಬಂದಿದೆ.

ಅಮೆರಿಕಾದಲ್ಲಿ ಪ್ರತಿ 1000 ಸೈನಿಕರಿಗೆ 8 ಮಂದಿ ಡಾಕ್ಟರುಗಳು.

ಹಾಂಕಾಂಗಿನಲ್ಲಿದ್ದ ಜಪಾನೀ ಗೂಡಿಯನ್ನಾಗಿ ಮಾಡಿದರಂತೆ.

ಇದುವರೆಗೆ ಮದರಾಸಿನಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟಿನ ವಿಚಾರಣೆಯಿಲ್ಲದೆ 644 ಮಂದಿ ಜೈಲಿನಲ್ಲಿರುವರು.

ಬ್ರಿಟಿಷ್ನಲ್ಲಿ ಬಿಳಿಗೆ ಕ್ಷಾಮ ಬಂದಿದ್ದರಿಂದ ಅಮೇರಿಕಾದಿಂದ ಆಮದು ಮಾಡಿಕೊಂಡಿರುವರು.

ರೂರ್ ಪ್ರಾಂತ್ಯವನ್ನು ಜರ್ಮನಿ ಕೈಯಿಂದ ತಪ್ಪಿಸಿಡೆರೆ. ಜರ್ಮನಿಯು ಯುದ್ಧ ಮಾಡಲಾರದು ಎಂದು ಕೆಂಟರ್ಬರಿಯ ಆರ್ಚಿಬಿಷಪ್‌ರವರು ಹೇಳುವರು.

ಅಮೆರಿಕಾದ ವಿಮಾನ ದಳದವರನ್ನು ಜಪಾನಿಗಳು ಕೊಂದಹಾಗೆ ಇಟಲಿಯವರು ಮಾಡಲಾರರೆಂದು ಕಾರ್ಡಿನಲ್ ಹಲ್ ರವರು ಹೇಳಿರುತ್ತಾರೆ.

ಫಿನ್‌ಲೆಂಡ್ ಇದೇ 4 ರಲ್ಲಿ ಸ್ವೀಡ್ ಮುಖಾಂತರ ರಾಜಿ ಮಾಡಿಕೊಳ್ಳುವುದಾಗಿ ರಷ್ಯಾಕ್ಕೆ ಹೇಳಿಕಳುಹಿಸಿತೆಂದು ಒರ್ವ ಚಾತ್ಮಿದಾರರು ಅಮೆರಿಕಾದ ಒಂದು ಪತ್ರಿಕೆಗೆ ಬರೆಯುತ್ತಾರೆ.

ಹಿಟ್ಲರನ ಸಂಗಡ ಸಂಭಾಷಣೆ ನಡೆಸಿ ಫ್ರಾನ್ಸಿಗೆ ಹಿಂತಿರುಗಿದಾಗ ಲಾವಲರವರಿಗೆ ಭಜದ ವೇಲೆ ಪೆಟ್ಟು ಬಿದ್ದಿತು. ಲಾವಲರ ಹಣಕಾಸಿನ ಮಂತ್ರಿಯಾಗಿ ಪರಿಸ್ಥಿತಿವಾಸವರಿಗೆ ತಂಬಾ ಗಾಯಗಳಾಗಿವೆ. ಇವರು ತಂಗಿದ್ದ ಹೋಟಲ್ ಮಾಟಿಗ್‌ನನ್ನಿನಲ್ಲಿ ಯಾರೋ ಬಾಂಬು ಎಸೆದರೆಂದು ಹೇಳಲಾಗಿದೆ.

ಮೊರಾರಾಬಾದಿನ ಒಂದು ಗೋರಿಯಲ್ಲಿ ಒಂದು ತರಹ ಶಬ್ದ ಕೇಳಿಬರುತ್ತಿದೆ. ಇದನ್ನು ಅಲ್ಲಿಯವರು ಕೇಳಿ ಆಶ್ಚರ್ಯ ಪಡುತ್ತಿರುವರು ಕಾರಣವೇ ನೆಂಬುದು ಇನ್ನೂ ಯಾರಿಗೂ ಗೊತ್ತಿಲ್ಲ. ಈ ಗೋರಿಯು ಈಗ್ಗೆ 55 ವರ್ಷಗಳಿಂದ ಇದೆ.

ಎಲ್ಲೆಲ್ಲಿ ಏನೇನು ?

ಸಂಯುಕ್ತ ಪ್ರಾಂತ್ಯದ ವೈಜ್ಞಾನಿಕರು ಒಂದು ವರ್ಷ ಕಷ್ಟಪಟ್ಟು ಕ್ವಿನಾ ಬದಲು ವಿ.ತ್ರೊಂದನ್ನು ಕಂಡುಹಿಡಿದಿದ್ದಾರೆ, ಇದರ ಹೆಸರು ಮೆಪಕ್ರೈನ್; ಇದಕ್ಕೆ ಅಮೆರಿಕಾದಲ್ಲಿ ಆಟಿಪ್ರಿನ್ ಎಂದು ಹೆಸರು. 1 ವರ್ಷಕ್ಕೆ 50 ಲಕ್ಷ ಗುಳಿಗೆಗಳನ್ನು ತಯಾರ್ಮಾಡುವರು.

ಒಬ್ಬ ಎ. ಆರ್. ವಾರ್ಡನ್ ತಾನು ಮದುವೆಯಾಗಲಿದ್ದವಳಿಗೆ ಒಂದೂವರೆ ಮಣ ಗೋಧಿಯನ್ನು ರಿಕ್ವಾವಲ್ಲಿ ಕಳುಹಿಸುತ್ತಿರುವಾಗ ದಾರಿಯಲ್ಲಿ ಪೊಲೀಸರಿಂದ ಪತ್ತೆಯಾಗಿ, ಲಗ್ನವಾಗುವ ಒದಲು ಜೈಲಿಗೆ ಹೋಗಬೇಕಾಯಿತು.

ಉತ್ತರ ಅಮೇರಿಕಾದಿಂದ ಯೂರೋಪಿಗೆ ಬರುವ ನೌಕೆಯನ್ನು ಕಾಯಲು ಪ್ರತಿಯೊಂದು ಮೈಲಿಯಲ್ಲಿಯೂ ಬ್ರಿಟಿಷ್, ಕೆನಡಿಯರ್ಸ್, ಅಮೆರಿಕ ನಾವೆಗಳೂ, ವಿಮಾನಗಳೂ ಕಾವಲಿಡಲಾಗುವುದಾಗಿ ಮುತ್ರಪತ್ರದವರು ಏರ್ಪಾಡು ಮಾಡುತ್ತಿರುವರು.

ಆಹಾರ ಸಮಸ್ಯೆಯನ್ನು ವ್ಯವಸ್ಥೆ ಮಾಡಲು ಇಂಡಿಯಾ ಸರಕಾರದವರು 6 ಮಂದಿ ಫುಡ್ ಕಮಿಷನರನ್ನು ನೇಮಕ ಮಾಡಿರುತ್ತಾರೆ. ಇವರು ಈಗ ಅವರವರ ಪ್ರಾಂತ್ಯಗಳಲ್ಲಿ ಸಂಚರಿಸುತ್ತಾ ವಿಷಯಗಳನ್ನು ವಂದಟ್ಟುಮಾಡಿಕೊಳ್ಳುತ್ತಿರುವರೆಂದು ತಿಳಿಯಬಂದಿದೆ.

ಪುಸ್ತಕಕ್ಕೆ ಬಂಪಾರ

ಈಗ ಎರಡು ತಿಂಗಳ ಕೆಳಗ ಇಂಗ್ಲೆಂಡಿನಲ್ಲಿ ಚೈನಾ ರಾಯಭಾರಿಯಾಗಿರುವ ಶ್ರೀಮತಿ ವೆಲ್ಲಿಂಗ್‌ಟನ್ ಕೂರರು, ಚೈನಾಕ್ಕೆ ತಕ್ಷಣವೇ ಮದ್ದುಗುಂಡು ಆಹಾರ ಕಳಿಸದಿದ್ದರೆ ಚೈನಾವು ಮುಳುಗಿ ಹೋಗುವುದು ಎಂದು ಹೇಳಿದ್ದರಷ್ಟೆ. ಇದು 2 ದಿನಗಳ ಹಿಂದೆ ಬಿಕರಿಗೆ ಕೊಡಲ್ಪಡಬೇಕಾಗಿತ್ತು. ಈಗಾಗಲೇ ಈ ಪುಸ್ತಕವನ್ನು ಪುಸ್ತಕ ವ್ಯಾಪಾರಿಗಳಿಗೆ ಹಂಚಲಾಗಿದೆ ಇದನ್ನು ಮಾರದಹಾಗೆ 6000 ಶುತೀವರ್ತಮಾನಗಳು ವರ್ತಕರಿಗೆ ಕಳಿಸಿರುತ್ತಾರೆ ತಿದ್ದುಪಡಿಯಾದ ಪುಸ್ತಕವು ಸಧ್ಯದಲ್ಲೇ ಪ್ರಕಟವಾಗುವದು. ಅಮೇರಿಕಾ ಸರಕಾರದವರು ಕೈಹಾಕಿದ್ದರಿಂದ ಹೀಗೆ ಮಾಡಬೇಕಾಯಿತು.